International Journal of Kannada Research
www.kannadajournal.com

**ISSN: 2454–5813**
IJKR 2019; 5(4): 139-140
© 2019 IJKR
www.kannadajournal.com
Received: 07-08-2019
Accepted: 09-09-2019

**ಮಂಜುನಾಥ ಎಂ.**
ಸಹಾಯಕ ಪ್ರಾಧ್ಯಾಪಕರು
ಜಿ.ಸಿ.ಕಾಲೇಜು ಅಂಕೋಲಾ

**Corresponding Author:**
**ಮಂಜುನಾಥ ಎಂ.**
ಸಹಾಯಕ ಪ್ರಾಧ್ಯಾಪಕರು
ಜಿ.ಸಿ.ಕಾಲೇಜು ಅಂಕೋಲಾ

# ಭಾರತದ ಪಶ್ಚಿಮ ಕರಾವಳಿಯ ಕಾವಿ ಕಲೆ (Kaavi art)

**ಮಂಜುನಾಥ ಎಂ.**

ಭಾರತದ ವರ್ಣಚಿತ್ರ ಕಲೆ ವೈವಿಧ್ಯಮಯ ಮಾದರಿಯಲ್ಲಿ ವಿವಿಧ ಪ್ರದೇಶಗಳಲ್ಲಿ ಪ್ರಚಲಿತದಲ್ಲಿದೆ. ಭಾರತೀಯ ವರ್ಣಚಿತ್ರದ ಎರಡು ಮೂಲ ರೂಪಗಳೆಂದರೆ 'ಭಿತಿ ್' (murạl) ಚಿತ್ರಗಳು ಮತ್ತು 'ಚಿಕಣಿ' (miniature) ಚಿತ್ರಗಳು. ಪ್ರಾಚೀನ ಭಾರತೀಯ ವರ್ಣಚಿತ್ರ ಶೈಲಿಗಳಲ್ಲಿ ಹೆಚ್ಚಿನವು ಗೋಡೆ ವರ್ಣಚಿತ್ರಗಳು ಅಥವಾ ಭಿತ್ತಿ ಚಿತ್ರಗಳಾಗಿ ಅಸ್ತಿತ್ವದಲ್ಲಿದ್ದವು. ಈ ಸಂಗತಿಗೆ ಅಜಂತಾ ಮತ್ತು ಎಲ್ಲೋರದ ಸೊಗಸಾದ ಭಿತ್ತಿ ಚಿತ್ರಗಳು, ವಿಜಯನಗರ ಕಾಲದ ಲೇಪಾಕ್ಷಿ ಮಂದಿರದ ಮತ್ತು ಮೈಸೂರು ಅರಮನೆಯ ಗೋಡೆಗಳು ಮತ್ತು ಮೇಲ್ಚಾವಣಿಗಳನ್ನು ಅಲಂಕರಿಸಿದ ವರ್ಣಚಿತ್ರಗಳೇ ಸಾಕ್ಷಿಯಾಗಿವೆ. ಈ ಭಿತ್ತಿ ಚಿತ್ರಗಳ ಮಾದರಿಯಲ್ಲೇ ಒಂದು ವಿಶಿಷ್ಟವಾದ ಕಾವಿ ಚಿತ್ರಕಲೆ ಭಾರತದ ಕೊಂಕಣ ತೀರ ಪ್ರದೇಶದಲ್ಲಿ ರೂಢಿಯಲ್ಲಿತ್ತು.

ಭಾರತದ ಪಶ್ಚಿಮ ಕರಾವಳಿಯ ದೇವಾಲಯಗಳಲ್ಲಿ ಕಂಡುಬರುವ ವಿಶಿಷ್ಟವಾದ 'ಕಾವಿ ಕಲೆ' ಕಲಾವಿದರ ಏಕವರ್ಣ ಕಲೆಯ (monochrome art) ಪಾಂಡಿತ್ಯಕ್ಕೆ ಸಾಕ್ಷಿಯಾಗಿವೆ. ಕಾವಿ ಕಲೆಯು ಬಿಳಿ ಬಣ್ಣದ ಹಿನ್ನಲೆಯಲ್ಲಿ ಒಂದೇ ವರ್ಣದಿಂದ (ಬಿಳಿ ಅಥವಾ ಕಪ್ಪು) ರಚಿಸಿದ ಚಿತ್ರಗಳಾಗಿವೆ. ಹೆಚ್ಚಿನ ದೇವಾಲಯಗಳನ್ನು ಕೆಂಪು ವರ್ಣದ ಚಿತ್ರಗಳಲ್ಲೇ ಅಲಂಕರಿಸಲಾಗಿದೆ. ಅದಕ್ಕಾಗಿಯೇ ಇದು 'ಕಾವಿ' (ಸ್ಥಳೀಯವಾಗಿ ಕೆಂಪು ಬಣ್ಣವನ್ನು ಕಾವು ಎಂದು ಕರೆಯುತ್ತಾರೆ) ಕಲೆಯೆಂದು ಜನಪ್ರಿಯಗೊಂಡಿತು. ಕೊಂಕಣಿಯಲ್ಲಿ 'ಕಾವ್' ಪದವು ಕೆಂಪು ವರ್ಣದ ದ್ರವ್ಯವನ್ನು ಸೂಚಿಸುತ್ತದೆ. ಇದನ್ನು ಸ್ಥಳೀಯವಾಗಿ ಲಭ್ಯವಿರುವ ಕೆಂಪು ಚಿರೆಕಲ್ಲು (laterite stone) ಇಂದ ಪಡೆಯುತ್ತಿದ್ದರು. ಇದು ಈ ವರ್ಣಚಿತ್ರದಲ್ಲಿ ಬಳಸಲಾಗುವ ಏಕೈಕ ಬಣ್ಣವಾಗಿದ್ದು ವಿರಳವಾಗಿ ಕಪ್ಪು ಬಣ್ಣ ಕೂಡ ಬಳಸಿದ ಉದಾಹರಣೆಗಳಿವೆ.

ಪಶ್ಚಿಮ ಕರಾವಳಿಯಲ್ಲಿ ದೇವಾಲಯಗಳ ನಿರ್ಮಾಣಕ್ಕಾಗಿ ಕೂಡ ಸಾಮಾನ್ಯವಾಗಿಕೆಂಪು ಚಿರೆಕಲ್ಲು ಬಳಸುತ್ತಾರೆ. ಗೋಡೆಗಳಿಗೆ ಗಿಲಾಯಿ ಮಾಡಲು ಸುಟ್ಟ ಚಿಪ್ಪಿಗಳಿಂದ (burnt sea shells) ತಯಾರಿಸಿದ ಬಿಳಿ ಸುಣ್ಣದ ಪುಡಿ ಮತ್ತು ಸ್ವಚ್ಛಗೊಳಿಸಿದ ಮರಳನ್ನು (sand) ಬೆಲ್ಲದ ಜೊತೆ ಬೆರಸಿ ಮಿಶ್ರಣವನ್ನು ಸುಮಾರು ಎರಡು ವಾರಗಳ ಕಾಲ ಹದಗೊಳಿಸಲು ಇಡುತ್ತಿದ್ದರು. ನಂತರದಲ್ಲಿ ಈ ಮಿಶ್ರಣದಿಂದ ಗೋಡೆಗಳಿಗೆ ಗಿಲಾಯಿ ಮಾಡಿ ಒಣಗಿಸುತ್ತಿದ್ದರು. ಗಿಲಾಯಿ ಒಣಗುವ ಮೊದಲು ಗೋಡೆಗಳನ್ನು ಕಾವಿ ಚಿತ್ರಕಲೆಯಿಂದ ಅಲಂಕರಿಸುವ ಸಿದ್ಧತೆ ನಡೆಯುತ್ತಿತ್ತು. ಕಾವಿ ಕಲಾಕಾರರು ನಯವಾದ ಸುಣ್ಣದ ಪುಡಿಯನ್ನು ಕೆಂಪು ಕಾವಿನೊಂದಿಗೆ ಬೆರಸಿ ಬೆಣ್ಣೆಯಂತಹ ಮಿಶ್ರಣವನ್ನು ಮಾಡಿಕೊಂಡು ತಾಪಿಯಿಂದ (steel trowel) ಮಿಶ್ರಣವನ್ನು ನಿಗದಿತ ಗೋಡೆಯ ಭಾಗದಲ್ಲಿ ಮೆತ್ತಿಕೊಳ್ಳುತ್ತಿದ್ದರು. ಈ ಭಾಗವನ್ನು ಸ್ವಲ್ಪ ಕಾಲ ಒಣಗಲು ಬಿಟ್ಟು ವಿವಿಧ ಆಕಾರದ 'ಕಾಂತ'ಗಳಿಂದ (ಚಪ್ಪಟೆ ಮತ್ತು ಮೊನಚಾದ ಸಾಧನಗಳು) ಕಲಾಕಾರರು ಚಿತ್ರವನ್ನು ಕೊರೆಯಲು ಪ್ರಾರಂಭಿಸುತ್ತಾರೆ. ಪರಿಣಿತ ಕಾವಿ ಕಲಾವಿದರು ಇದನ್ನು ಬಿಟ್ಟು ಇನ್ನಿತರ ಯಾವುದೇ ಸಾಧನಗಳ ಬಳಕೆಯಿಲ್ಲದೇ ಸೂಕ್ಷ್ಮವಾದ ಚಿತ್ರಗಳನ್ನು ಕೊರೆಯುತ್ತಾರೆ. ಸಂಕೀರ್ಣ ಚಿತ್ರಗಳನ್ನು ಕಾಗದದ ಮೇಲೆ ಚಿತ್ರಿಸಿ ಗೋಡೆಗೆ ಮೆತ್ತಿಕೊಳ್ಳುತ್ತಿದ್ದರು. ದೊಡ್ಡದಾದ ಚಿತ್ರಗಳಿಗೆ ಮರದ ಚೌಕಟ್ಟು, ಅಳತೆ ಪಟ್ಟಿ, ಕಂಪಾಸು ಮತ್ತು ಕೋನ ಪಟ್ಟಿಗಳನ್ನು ಬಳಸುತ್ತಾರೆ. ನಂತರ ತಾವು ರಚಿಸಿದ ಚಿತ್ರಗಳನ್ನು ಒಣಗಲು ಬಿಡುತ್ತಾರೆ. ಅದಕ್ಕೆ ಕೆಲದಿನ ನೀರು ಸಿಂಪಡಿಸಿ ಇನ್ನಷ್ಟು ಗಟ್ಟಿಯಾಗುವಂತೆ ಮಾಡುತ್ತಾರೆ. ಪ್ರತಿ ಸಿಂಪಡಿಕೆಯ ನಂತರ ನಯವಾದ ಬೆಣಚು ಕಲ್ಲಿನಿಂದ ಹೊಳಪು ಮಾಡುತ್ತಿದ್ದರು. ಈ ವಿಧಾನ ಚಿತ್ರಗಳು ಬಿರುಕು ಬಿಡದಂತೆ ತಡೆದು ಬಹುಕಾಲ ಇರುವಂತೆ ಮಾಡುತ್ತದೆ.

ಕಾವಿ ಚಿತ್ರಗಳನ್ನು ದೇವಾಲಯದ ಇಂತಹದೇ ನಿರ್ದಿಷ್ಟ ಭಾಗದಲ್ಲಿ ಚಿತ್ರಿಸಬೇಕೆಂಬ ನಿಯಮವಿದ್ದಿರಲಿಲ್ಲ. ದೇಗುಲದ ನೈಜ ಸೌಂದರ್ಯಕ್ಕೆ ಅನುಗುಣವಾಗಿ ಅಗತ್ಯವಿರುವಲ್ಲಿ ಇದನ್ನು ಚಿತ್ರಿಸುತ್ತಿದ್ದರು.

ಹೆಚ್ಚಾಗಿ ಇಂತಹ ಸುಂದರ ಕಾವಿ ಚಿತ್ರಗಳನ್ನು ದೇವಾಲಯದ ಹೊರ ಮತ್ತು ಒಳಭಾಗದ ಗೋಡೆಗಳ ಮೇಲೆ, ಮಹಾದ್ವಾರ,ನವರಂಗ,ಮೇಲ್ಛಾವಣಿ,ಮುಖಮಂಟಪ,ಸುಖನಾಸಿ,ಗಭ ರ್ಗೃಹ,ಕಂಬಗಳು, ಕಿಟಕಿ ಮತ್ತು ಜಾಲಂಧ್ರಗಳ ಸುತ್ತಲೂ ಕಾಣುತ್ತೇವೆ. ಈ ಮನಮೋಹಕ ಕಾವಿ ಚಿತ್ರಗಳು ದೇವಾಲಯ ಸಾಮಾನ್ಯ ನೋಟದ ಮೆರುಗನ್ನು ಹೆಚ್ಚಿಸುತ್ತದಲ್ಲದೇ, ದೇವಾಲಯಗಳು ಮತ್ತಷ್ಟು ಆಕರ್ಷಣೀಯವಾಗಿ ಕಾಣುವಂತೆ ಮಾಡುತ್ತವೆ. ಸಾಮಾನ್ಯವಾಗಿ ಕಾವಿ ಕಲೆಯನ್ನು ಹೊಂದಿದ ಕರಾವಳಿಯ ದೇವಾಲಯಗಳಲ್ಲಿ ಗರ್ಭಗೃಹದ ಮೇಲೆ ಅಂತಸ್ತು ಕಾಣುತ್ತೇವೆ. ಮೇಲ್ಛಾವಣಿಯನ್ನು ಕರಾವಳಿಯಲ್ಲಿ ದೊರೆಯುವ ಕೆಂಪು ಮಣ್ಣಿನ ಸುಟ್ಟ ಹಂಚುಗಳಿಂದ ಮುಚ್ಚಿರುತ್ತಾರೆ. ದೇವಾಲಯದ ಮೇಲ್ಭಾಗದ ಸಾಲು, ದ್ವಾರಗಳು, ಕಿಟಕಿ– ಗೂಡು– ಜಾಲಂದ್ರಗಳನ್ನು ಅರಳಿದ ಪುಷ್ಪಗಳ ಸಾಲು, ಪರ್ಣಗಳ ಸಾಲು ಮತ್ತು ಸುರುಳಿಗಳ ಸಾಲಿನಲ್ಲಿ ಅಲಂಕರಿಸಿದರೆ, ದೇಗುಲದ ಗೋಡೆಗಳ ಮೇಲೆ ಕೊರೆದ ಕಾವಿ ಚಿತ್ರಗಳು ಧಾರ್ಮಿಕ ಸ್ವರೂಪದ್ದಾಗಿದ್ದವು. ಅಂದರೆ ರಾಮಾಯಣ,ಮಹಾಭಾರತ,ಭಾಗವತ ಮತ್ತು ಪುರಾಣಗಳಿಗೆ ಸಂಬಂಧಿಸಿದ ವಿಷಯಗಳನ್ನು ಕೊರೆಯುತ್ತಿದ್ದರು. ಉದಾ: ಭಸ್ಮಾಸುರ ಮೋಹಿನಿ, ಗರುಡವಾಹನ ವಿಷ್ಣು, ಅರ್ಜುನ ಸಾರಥಿ ಕೃಷ್ಣ,ಶಿವ ಧನಸ್ಸನ್ನು ಹಿಡಿದ ಶ್ರೀ ರಾಮಚಂದ್ರ, ಶೇಷ ಶಯನ ವಿಷ್ಣು ಮತ್ತು ಲಕ್ಷ್ಮೀದೇವಿ, ವಿಷ್ಣುವಿನ ದಶಾವತಾರ, ಲಕ್ಷ್ಮೀ– ವಿಷ್ಣು ಸರಸ, ಗೋವರ್ಧನ ಗೋಪಾಲ,ಕಾಳಿಂಗ ಮರ್ಧನ,ಮಹಿಷಾಸುರ ಮರ್ಧಿನಿ,ಆಂಜನೇಯ ಸರಸ್ವತಿ,ನಾರದ ಮುನಿ, ಪರುಷ ರಾಮ,ಗರುಡ,ನಾಗ,ಗೋ–ಹಸ್ತಿ, ಕಾಮಧೇನು,ದ್ವಾರಪಾಲಕರು,ಕುದುರೆ ಸವಾರ,ಕಿನ್ನರರು,ಯಕ್ಷರು ಮತ್ತು ಗಂಧರ್ವರು ಹೀಗೆ ಅನೇಕ ದೃಶ್ಯಗಳನ್ನು ಕಾಣಬಹುದು.ಸೂರ್ಯ ಮಂಡಲ ಮತ್ತು ಚಂದ್ರ ಮಂಡಲ ಚಿತ್ರಗಳು ಎಲ್ಲಾ ದೇವಾಲಯಗಳಲ್ಲಿ ಕಂಡುಬರುತ್ತಿದ್ದವು. ಇಂದಿಗೂ ಅಂಕೋಲಾದ ಮಹಾಮ್ಮಾಯಿ, ಶಿರಶಿಯ ಮಾರಿಕಾಂಬಾ, ಕುಮಟಾದ ಮಹಾಲಸ ನಾರಾಯಣಿ, ಗೋವಾದ ಶಾಂತಾದುರ್ಗ,ರಾಮನಾಥ ಮತ್ತು ಮಹಾಲಸ ನಾರಾಯಣಿ ದೇವಾಲಯಗಳಲ್ಲಿ ಕಾವಿ ಕಲೆಯ ಸೊಬಗನ್ನು ವೀಕ್ಷಿಸಬಹುದು.

ಕಾವಿ ಕಲೆಯನ್ನು ಕೊಂಕಣ ಪ್ರದೇಶದಲ್ಲಿ ವಿಶೇಷವಾಗಿ ಗೋವಾ, ಕರ್ನಾಟಕ ಕರಾವಳಿ ಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ಕಾಣಬಹುದು. ಕಾವಿ ಭಿತ್ತಿ ಚಿತ್ರಗಳನ್ನು ದೇವಾಲಯಗಳಲ್ಲದೆ ದೊಡ್ಡ ಹಳೆಯ ಮನೆಗಳಲ್ಲಿ ವಿರಳವಾಗಿ ಚರ್ಚುಗಳ ಗೋಡೆಗಳಲ್ಲೂ ನೋಡಬಹುದು. ಕಾವಿ ಕಲೆಯನ್ನೇ ಹೆಚ್ಚಾಗಿ ಬಳಸುಕೊಳ್ಳಲು ಕಾರಣ ಕರಾವಳಿ ಪ್ರದೇಶದಲ್ಲಿ ಹೆಚ್ಚಿನ ಮಳೆಯಾಗುವುದರಿಂದ ಇಲ್ಲಿನ ಹವಾಮಾನ ಆರ್ಧ ಮತ್ತು ತೇವಾಂಶದಿಂದ ಕೂಡಿದೆ. ಇಲ್ಲಿನ ವಾತಾವರಣಕ್ಕೆ ಬಹುವರ್ಣದ ಚಿತ್ರಗಳು ಧೀರ್ಘಕಾಲದವರೆಗೆ ಇರದೆ ಅಲ್ಪಾವಧಿಯಲ್ಲಿಯೇ ತಮ್ಮ ಮೆರಗನ್ನು ಕಳೆದುಕೊಳ್ಳುತ್ತವೆ. ಆದರೆ ಏಕವರ್ಣದಿಂದ ಕೂಡಿದ ಕಾವಿ ಕಲೆ ಬಹುಕಾಲ ಬಾಳುತ್ತದಲ್ಲದೆ ಆಗಾಗ ಕಾವಿ ಬಣ್ಣವನ್ನು ಲೇಪಿಸುತ್ತಿದ್ದರೆ ಮತ್ತೆ ಹೊಸತಂತೆ ಕಾಣುತ್ತದೆ.

ಇತ್ತೀಚಿನ ವರ್ಷಗಳಲ್ಲಿ ಈ ಕಾವಿಕಲೆ ಮರೆಯಾಗುತ್ತಿದೆ. ಕೃಷ್ಣಾನಂದ ಕಾಮತ ಎಂಬವರು ಈ ಕಲೆಯ ಬಗ್ಗೆ ಆಸಕ್ತಿ ವಹಿಸಿ ಅಧ್ಯಯನ ನಡೆಸಿ ಲೇಖನವನ್ನು ಪ್ರಕಟಿಸಿದ್ದಾರೆ. ಈ ಕಲೆಯ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನ ಮತ್ತು ಪ್ರೋತ್ಸಾಹನದ ಅಗತ್ಯತೆಯಿದೆ. ಕಾವಿ ಕಲೆ ಹೆಚ್ಚಾಗಿ ಹಳೆಯ ಕಾಲದ ದೇವಾಲಯಗಳಲ್ಲಿರುವುದರಿಂದ ,ಇಂತಹ ದೇವಾಲಯಗಳ ನವೀಕರಣ ಕಾರ್ಯಗಳು ನಡೆದಾಗ ಆಧುನಿಕ ಕಲಾ ವಿನ್ಯಾಸಕ್ಕೇ ಹೆಚ್ಚು ಪ್ರಾಶಸ್ತ್ಯ ನೀಡಿದ್ದರಿಂದ ಇದು ತನ್ನ ಅಸ್ಥಿತ್ವವನ್ನು ಕಳೆದುಕೊಂಡಿತು. ಹೀಗಾಗಿ ಕಾವಿ ಕಲಾವಿದರು ಕೂಡ ತಮ್ಮ ಉತ್ತರಾಧಿಕಾರಿಗಳಿಗೆ ಸರಿಯಾದ ತರಬೇತಿ ನೀಡಲಿಲ್ಲ. ಈ ಕಲೆ ಬಳಕೆಯಲ್ಲಿರಬೇಕಾದರೆ " ಹಳೆಯದು ಬಂಗಾರ" (old is gold) ಎಂಬ ನುಡಿಯಂತೆ ದೇವಾಲಯಗಳ ನವೀಕರಣ ಕಾರ್ಯಗಳು ನಡೆದಾಗ ಕಾವಿ ಕಲೆಯನ್ನೂ ಕೆಲ ಮಟ್ಟಿಗೆ ಬಳಸಿಕೊಳ್ಳುವುದು ಸೂಕ್ತವಾದುದು.

### ಆಕರ ಗ್ರಂಥಗಳು


1. Kavi art – by Krishnanand Kamat
2. Sivaramamurthi C., 1970, Indian Paintings, National Book Trust India, New Delhi.
3. Karanth Shivaram, 1972, Karnataka Paintings, Prasaranga, Mysore University, Mysore.
4. Rao S.R., and B.V.K. Shastri, 1980, Traditional Paintings of Karnataka, Karnataka Kala Parishat, Bangalore.